# ಪಾತ್ರವನ್ನು ಹೆಣ್ಣಾಗಿ ಅನುಭವಿಸಿದ್ದೇನೆ

**ಅಶ್ವಿನಿ ಎಸ್.ಎನ್.**

ಸ್ಟಾರ್ ಸುವರ್ಣದ 'ಮುದ್ದುಲಕ್ಷ್ಮಿ'ಯ ಲಕ್ಷ್ಮಿ



◆ **ನಿಮ್ಮ ಪರಿಚಯ ಮಾಡಿಕೊಡಬಹುದಾ?**

ಹುಟ್ಟೂರು ಮೈಸೂರು, ಬೆಳೆದಿದ್ದು ಬೆಂಗಳೂರು. ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದೆ. ಆ್ಯಂಕರ್ ಆಗಿ ನನ್ನ ವೃತ್ತಿ ಜೀವನವನ್ನು ಆರಂಭಿಸಿದೆ. ಕ್ರಮೇಣ ನಟನೆಯತ್ತ ಮುಖಮಾಡಿದವಳು ಅದನ್ನೇ ವೃತ್ತಿಯಾಗಿ ಮುಂದುವರಿಸಿದ್ದೇನೆ. ಸಂಖ್ಯೆಯ ದೃಷ್ಟಿಯಿಂದ ಇದು ನನಗೆ ನಾಲ್ಕನೇ ಧಾರಾವಾಹಿ. ಆದರೆ, ನಾಯಕಿಯಾಗಿ ಮೊದಲನೇ ಪಾತ್ರ ನಿರ್ವಹಿಸುತ್ತಿದ್ದೇನೆ.

◆ **ಭಿನ್ನ ವ್ಯಕ್ತಿತ್ವದ ಲಕ್ಷ್ಮಿ ಬಗ್ಗೆ ಹೇಳುವುದಾದರೆ...**

ಸೌಂದರ್ಯ ಮಾಪಕ ಶಕ್ತಿಯಾಗಿ ಮೈ ಬಣ್ಣ ಪ್ರಮುಖ ಪಾತ್ರವಹಿಸುತ್ತದೆ ಎನ್ನುವ ನಂಬಿಕೆ ನಮ್ಮಲ್ಲಿ ಇದೆ. ಸೌಂದರ್ಯಕ್ಕೆ ಬಣ್ಣ ಬಿಳಿ ಇರಲೇಬೇಕು ಎನ್ನುವ ಭ್ರಮೆ ಕೂಡ ನಮ್ಮಲ್ಲಿ ಮನೆ ಮಾಡಿದೆ. ಅದು ತಪ್ಪು ಅಭಿಪ್ರಾಯ ಎನ್ನುವ ಪ್ರಜ್ಞೆಯನ್ನು ಮೂಡಿಸುತ್ತಾಳೆ ಲಕ್ಷ್ಮಿ. ಈಕೆ ಕೃಷ್ಣ ಸುಂದರಿ. ಮೈಬಣ್ಣ ತನ್ನ ಸೌಂದರ್ಯಕ್ಕೆ ಅಡ್ಡಿಯಾಗಿಲ್ಲ ಎನ್ನುವುದನ್ನು ಆಕೆ ತೋರಿಸುತ್ತಾಳೆ. ಸೌಂದರ್ಯಕ್ಕೆ ಬಣ್ಣ ಇಲ್ಲ. ಹೆಣ್ಣು ಸಹಜವಾಗಿ ಸುಂದರವಾಗಿರುತ್ತಾಳೆ ಎನ್ನುವುದನ್ನು ಬಿಂಬಿಸುವ ಕಥೆ. ವರ್ಣದ ಕಾರಣಕ್ಕೆ ಆಕೆ ಅನುಭವಿಸುವ ತೊಂದರೆಯನ್ನು ಇಲ್ಲಿ ಸೆರೆಹಿಡಿಯಲಾಗಿದೆ. ಕಪ್ಪುವರ್ಣವಾದರೂ ಚಂದವಿದ್ದಾಳೆ ಎನ್ನುವ ಮನೋಸ್ಥಿತಿಯಲ್ಲೇ ಹುಡುಗನೊಬ್ಬ ಮದುವೆಯಾಗುತ್ತಾನೆ. ಅವನು ಮಾತ್ರ ಬೆಳ್ಳಗಿದ್ದಾನೆ. ಸುಖವಾಗಿದ್ದ ಅವರ ಸಂಸಾರ ಸೌಧದಲ್ಲಿ ಅನುಮಾನ ಎಂಬ ಬಿರುಕು ಮೂಡುತ್ತದೆ. ಹೆಂಡತಿಯ ಮೇಲೆ ಸಂಶಯ ಬೆಳೆಸಿಕೊಳ್ಳುತ್ತಾ ಆಕೆಯನ್ನು ಕಡೆಗಣಿಸುತ್ತಾನೆ. ಅಷ್ಟರಲ್ಲಿ ಆಕೆ ಗರ್ಭಿಣಿಯಾಗಿರುತ್ತಾಳೆ. ಗಂಡನನ್ನು ತೊರೆದ ಒಂಟಿ ಬದುಕಿನ ಹುಡುಗಿ ತನ್ನ ಸ್ವಾಭಿಮಾನದ ಬದುಕನ್ನು ರೂಪಿಸಿಕೊಳ್ಳುವುದು ಕರುಣಾಜನಕವಾಗಿದೆ. ಬ್ಯೂಟಿ ಎನ್ನುವುದು ಗ್ಲಾಮರ್ ಮಾತ್ರ ಅಲ್ಲ ಎನ್ನುವುದನ್ನು ಹೇಳುವ ಜೊತೆಗೆ ಅಸಂಖ್ಯಾತ ಹೆಣ್ಣುಮಕ್ಕಳ ನೋವನ್ನು ಲಕ್ಷ್ಮಿ ಪ್ರತಿನಿಧಿಸುತ್ತಾಳೆ. ಅತ್ಯಂತ ಸವಾಲಿನ ಪಾತ್ರ ಎಂದು ನನಗೆ ಅನ್ನಿಸಿದೆ.

◆ **ನೀವು ನಟಿಯಾಗಿದ್ದು ಹೇಗೆ?**

ಕಾಲೇಜು ದಿನಗಳಲ್ಲಿಯೇ ಅಂತಹ ಒಂದು ಕನಸು ನನ್ನಲ್ಲಿ ಮೂಡಿತ್ತು. ಏಕೆಂದರೆ ಅಂತಹ ವಾತಾವರಣ ನಮ್ಮ ಕಾಲೇಜಿನಲ್ಲಿಯೇ ನೆಲೆಗೊಂಡಿತ್ತು. ಓದಿನ ಜೊತೆ ಸಾಂಸ್ಕೃತಿಕವಾಗಿ ಸಿಕ್ಕಾಪಟ್ಟೆ ಬೆಂಬಲ ಕಾಲೇಜಿನಲ್ಲಿ ದೊರೆಯಿತು. ಆಗ ನಾನು ನನ್ನ ಆಶೆಯನ್ನು ಮತ್ತಷ್ಟು ಬಲಿಷ್ಠಗೊಳಿಸಲು ಸಾಧ್ಯವಾಯಿತು. ರಂಗಭೂಮಿಯ ಮೋಹವೂ ಹೆಚ್ಚುತ್ತಾ ಹೋಯಿತು. ಕಾರಣ ಏನೇ ಇದ್ದರೂ ನನ್ನ ಆಸೆಯಿಂದಲೇ ನಾನು ನಟಿಯಾಗಿದ್ದೇನೆ.

◆ **ನಿಮಗೆ ಖುಷಿ ಕೊಡುವಂತಹ ಪಾತ್ರ ಎಂತಹದ್ದು?**

ಮುದ್ದುಲಕ್ಷ್ಮಿ ರೀತಿಯ ಪಾತ್ರಗಳೇ ನನಗಿಷ್ಟ. ಬಹುತೇಕರು ಗ್ಲಾಮರ್ ಬಗ್ಗೆ ತಲೆಕೆಡಿಸಿಕೊಳ್ಳುತ್ತಾರೆ. ತಾವು ಏನು ಅಲ್ಲವೋ ಅದನ್ನು ಹುಸಿಯಾಗಿ ತೋರಿಸಲು ಅವರು ಇಷ್ಟಪಡುತ್ತಾರೆ. ನಾನು ಹೇಗಿದ್ದೇನೆ ಎನ್ನುವುದು ಗೊತ್ತಿಲ್ಲ. ಆದರೆ, ಲಕ್ಷ್ಮಿ ಎಷ್ಟೇ ಸರಳವಾಗಿದ್ದರೂ ಆಕೆಯನ್ನು ಮನೆ ಮಗಳಂತೆ ಪ್ರೇಕ್ಷಕರು ಪ್ರೀತಿಸುತ್ತಿದ್ದಾರೆ. ಹತ್ತು ನಾಯಕಿಯರ ಪಾತ್ರಗಳು ಒಟ್ಟಿಗೆ ಇಟ್ಟು ನೋಡಿದರೂ ಇದು ಭಿನ್ನ ಅನ್ನಿಸುತ್ತದೆ. ಅದಕ್ಕೆ ಇದೇ ನನಗೆ ಇಷ್ಟ. ನಾವು ಪ್ರತಿದಿನ ನಟನೆಯನ್ನು ಮಾಡುತ್ತೇವೆ. ಹೊಸದಾಗಿ ಏನು ಮಾಡುತ್ತೇವೆ, ಏನನ್ನು ಕಲಿಯುತ್ತೇವೆ ಎನ್ನುವುದು ಮುಖ್ಯ. ದಿನವೂ ವೈವಿಧ್ಯತೆ ಇರಬೇಕು. ನಿನ್ನೆಯಂತೆ ಇವತ್ತೂ ಇದ್ದರೆ ಏಕತಾನತೆ ಅನ್ನಿಸುತ್ತದೆ. 'ಅಳುವಾಗ ಅತ್ತು, ನಗುವಾಗ ನಕ್ಕು, ಮುಗಿದಿತ್ತು ಅರ್ಧ ದಾರಿ' ಎನ್ನುವಂತೆ ಅಳಬೇಕು, ನಗಬೇಕು, ಕುಣಿಯಬೇಕು, ಜಗಳ ಮಾಡಬೇಕು ಭಿನ್ನ ಭಾವಾಭಿವ್ಯಕ್ತಿಯ ಲಯದ ಜೊತೆ ಆಟ ಆಡುವಂತೆ ನಾನು ಮಾಡುವ ಪಾತ್ರ ಇರಬೇಕು. ಎಂತಹ ಪಾತ್ರವಾದರೂ ಆ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ.

◆ **ಲಕ್ಷ್ಮಿ ಪಾತ್ರ ಮಾಡುವಾಗ ಅಶ್ವಿನಿ ಆದ ನಿಮ್ಮ ಮನಸ್ಥಿತಿ ಹೇಗಿರುತ್ತದೆ?**

ಮೇಕಪ್ ಹಾಕಿದ ಮೇಲೆ ಲಕ್ಷ್ಮಿನೇ ಆಗಿರುತ್ತೇನೆ. ಅಲ್ಲಿ ಅಶ್ವಿನಿ ಆಗಿರಲು ಸಾಧ್ಯವಿಲ್ಲ. ಮೇಕಪ್ ಹಾಕಿದ ಮೇಲೆ ಆ ಪಾತ್ರಕ್ಕೆ ಬೆಲೆ ಕೊಡುತ್ತಾರೆ. ಆದರೆ ಆ ಪಾತ್ರ ಅಶ್ವಿನಿಯಾದ ನನ್ನನ್ನು ಪ್ರಭಾವಿಸುತ್ತದೆ. ಗ್ಲಿಸರಿನ್ ಹಾಕಿ ಅಳುವುದಿಲ್ಲ. ಸ್ವಪ್ರಯತ್ನದಿಂದಲೇ ನೈಜ ಅಭಿನಯವನ್ನು ನೀಡುತ್ತೇನೆ. ದಿನದಲ್ಲಿ ಹತ್ತು ಅಂತಹ ಸೀನ್ ಬಂದರೂ ಅದನ್ನು ಸಮರ್ಪಕವಾಗಿ ಮಾಡುತ್ತೇನೆ. ಸೀನ್ ಮುಗಿದು ಗಂಟೆಯಾದರೂ ನನ್ನ ದುಃಖ ಕಡಿಮೆ ಆಗಿರುವುದಿಲ್ಲ. ಅಷ್ಟು ಪಾತ್ರದಲ್ಲಿ ಭಾವಪರವಶಳಾಗಿರುತ್ತೇನೆ. ಅಕ್ಷರಶಃ ಬೇರೆಯವರು ಸಾಂತ್ವನ ಹೇಳಿ ಸಮಾಧಾನ ಮಾಡಿದ್ದಿದೆ. ಭಾವನಾತ್ಮಕವಾಗಿ ತುಂಬ ವ್ಯತ್ಯಾಸ ಇದ್ದರೂ ಹೆಣ್ಣಾಗಿ ಅದನ್ನು ನೋಡಿದಾಗ ಆ ಅನುಭವ ಇಬ್ಬರ ಅನುಭವವೂ ಆಗುತ್ತದೆ.

■ **ರಾಘವೇಂದ್ರ ಕೆ.**